# ಸಮಾಜದಿಂದ ಪಡಕೊಂಡದ್ದನ್ನು ಕಿಂಚಿತ್ತಾದರೂ ಮರಳಿಸೋಣ

## ಜನಸೇವಾ ಕೇಂದ್ರ ಫಲಾನುಭವಿಗಳು, ಕಟ್ಟಡ ಕಾರ್ಮಿಕರ ಸಮಾವೇಶದಲ್ಲಿ ಸದಾನಂದ ಗೌಡ



**ಪುತ್ತೂರು: ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ದೀಪ ಬೆಳಗಿ ಉದ್ಘಾಟಿಸಿದರು.**

ಪುತ್ತೂರು, ಮಾ. 25: ಸಮಾಜದಿಂದ ಪಡೆದುಕೊಂಡು ದರಲ್ಲಿ ಕಿಂಚಿತ್ತನ್ನಾದರೂ ಸಮಾಜಕ್ಕೆ ಮರಳಿಸುವ ಮನಸ್ಸು ಇದ್ದವರು ಮಾತ್ರ ಮನುಷ್ಯರು ಎನಿಸಿಕೊಳ್ಳುತ್ತಾರೆ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಹೇಳಿದರು.

ರೈ ಎಸ್ಟೇಟ್ಸ್ ಎಜುಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ಪ್ರವರ್ತಿತ ಜನಸೇವಾ ಕೇಂದ್ರ ಪುತ್ತೂರು ಇದರ ಫಲಾನುಭವಿಗಳ ಮತ್ತು ಶ್ರಮಜೀವಿ ಕಟ್ಟಡ ಕಾರ್ಮಿಕರ ಸಂಘದ ಸಮಾವೇಶವನ್ನು ರವಿವಾರ ಅವರು ಉದ್ಘಾಟಿಸಿದರು.

**ಉತ್ತಮ ಬೆಳವಣಿಗೆ**

ಎಲ್ಲವೂ ಆರಂಭವಾಗುವುದು ಸಣ್ಣ ಹೆಜ್ಜೆಗಳ ಮೂಲಕ. ಪ್ರಗತಿಪರ ಚಿಂತನೆಯ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಯೊಬ್ಬರಿಗೂ ಆರೋಗ್ಯ ಭಾಗ್ಯ ನೀಡುವ ಉದ್ದೇಶದಿಂದ 5 ಲಕ್ಷ ರೂ. ತನಕದ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೊಳಿಸುತ್ತಿದ್ದಾರೆ. ಎಲ್ಲವನ್ನೂ ಸರಕಾರವೇ ಮಾಡಲು ಸಾಧ್ಯವಿಲ್ಲ, ಸಂಘ ಸಂಸ್ಥೆಗಳು, ಟ್ರಸ್ಟ್‌ಗಳು ಸರಕಾರದ ಸವಲತ್ತುಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಲಭಿಸುವಂತೆ ನೋಡಿಕೊಳ್ಳುವುದು ಉತ್ತಮ ಬೆಳವಣಿಗೆ ಎಂದು ಡಿ.ವಿ.ಎಸ್. ಹೇಳಿದರು.

ರೈ ಎಸ್ಟೇಟ್ಸ್ ಎಜುಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್‌ನ ಪ್ರವರ್ತಕ ಕೆ.ಎಸ್. ಅಶೋಕ್ ಕುಮಾರ್ ರೈ ಪ್ರಸ್ತಾವನೆಗೈದು, ಮಂಗಳೂರಿನಲ್ಲಿ ನಿರ್ಗತಿಕರಾಗಿದ್ದ 53 ಮಂದಿ ಏಡ್ಸ್ ಪೀಡಿತ ಮಕ್ಕಳ ಬದುಕಿಗೆ ನೆರವಾಗುವುದರೊಂದಿಗೆ ಆರಂಭಗೊಂಡ ಟ್ರಸ್ಟ್ ಪೆರ್ನೆ ಅನಿಲ ಟ್ಯಾಂಕರ್ ದುರಂತ ಸಂತ್ರಸ್ತರಿಗೆ ನೆರವು ನೀಡಿರುವುದು ಸಹಿತ ಅನೇಕ ಚಟುವಟಿಕೆಗಳನ್ನು ನಡೆಸಿದೆ ಎಂದರು.

**ದೀನ್ ದಯಾಳ್ ಧ್ಯೇಯದಂತೆ**

ಸುಮಾರು 1,200 ಕಟ್ಟಡ ಕಾರ್ಮಿಕರಿಗೆ ಪಿಂಚಣಿಗಾಗಿ ಕಾರ್ಡ್, 61 ಮಂದಿಗೆ ಮನೆ ನಿರ್ಮಾಣ, ದೀಪಾವಳಿ ಸಂದರ್ಭದಲ್ಲಿ 12,000 ಮಂದಿಗೆ ಆರ್ಥಿಕ ನೆರವು, 1,500 ಮಕ್ಕಳಿಗೆ ಉಚಿತ ಬಸ್‌ಪಾಸ್, 80 ಮಂದಿ ಮನೆಯ ಮೂಲ ಸೌಕರ್ಯ, 1,250 ಮಂದಿಗೆ ಪಾನ್ ಕಾರ್ಡ್ ವ್ಯವಸ್ಥೆ 620 ಮಂದಿಗೆ ಟೈಲರಿಂಗ್ ಕಲಿಕೆ, 260 ಮಂದಿಗೆ ಹಕ್ಕುಪತ್ರಕ್ಕೆ ವ್ಯವಸ್ಥೆ ಸೇರಿದಂತೆ ಕಷ್ಟದಲ್ಲಿರುವವರಿಗೆ ನೆರವಾಗುವ ದೀನ್ ದಯಾಳ್ ಉಪಾಧ್ಯಾಯರ ಧ್ಯೇಯದಂತೆ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ ಎಂದು ಅಶೋಕ್ ಕುಮಾರ್ ರೈ ಅವರು ಹೇಳಿದರು.

**ಪುಸ್ತಕ ಬಿಡುಗಡೆ**

ಜನಸೇವಾ ಕೇಂದ್ರದಿಂದ ನಡೆಸಲಾದ ಸಮಾಜಮುಖಿ ಕಾರ್ಯಚಟುವಟಿಕೆಗಳ ಕುರಿತ ಪುಸ್ತಕವನ್ನು ಡಿ.ವಿ. ಸದಾನಂದ ಗೌಡ ಬಿಡುಗಡೆಗೊಳಿಸಿದರು. ಗಿರಿಜಾ ಎಸ್. ರೈ ಕೋಡಿಂಬಾಡಿ ಭಾರತ ಮಾತೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಬಿಜೆಪಿ ಪುತ್ತೂರು ಮಂಡಲ ಅಧ್ಯಕ್ಷ ಚನಿಲ ತಿಮ್ಮಪ್ಪ ಶೆಟ್ಟಿ, ದ.ಕ.ಜಿ.ಪಂ. ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಪುತ್ತೂರು ತಾ.ಪಂ. ಅಧ್ಯಕ್ಷೆ ಭವಾನಿ ಚಿದಾನಂದ, ಬಿಜೆಪಿ ಜಿಲ್ಲಾ ಪ್ರಶಿಕ್ಷಣ ಪ್ರಕೋಷ್ಠ ಪ್ರಮುಖ್ ಅಪ್ಪಯ್ಯ ಮಣಿಯಾಣಿ, ಶ್ರಮಜೀವಿ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಮುನೀರ್ ನಿನ್ನಿಕಲ್, ಅಶೋಕ್ ಕುಮಾರ್ ರೈ ಅವರ ತಾಯಿ ಗಿರಿಜಾ ಎಸ್. ರೈ, ಪತ್ನಿ ಸುಮಾ ಅಶೋಕ್ ಕುಮಾರ್ ರೈ ವೇದಿಕೆಯಲ್ಲಿದ್ದರು.

**ಸೇವಾ ಸವಲತ್ತುಗಳ ವಿತರಣೆ**

ಜನಸೇವಾ ಕೇಂದ್ರದಿಂದ ಬಡವರು ಹಾಗೂ ಅಸಹಾಯಕರಿಗೆ ಪ್ರಯೋಜನಕಾರಿಯಾಗುವಂತೆ ನೀಡಲಾದ 42 ಕುಟುಂಬಗಳ ಸಹಾಯಧನ ಚೆಕ್, 15 ಕುಟುಂಬಗಳಿಗೆ ಜಾಗದ ಆರ್‌ಟಿಸಿ, 5 ಮಂದಿಗೆ 1 ತಿಂಗಳ ವಾಹನ ಚಾಲನ ತರಬೇತಿ ಪ್ರಮಾಣಪತ್ರ ಮತ್ತು ಪರವಾನಿಗೆ, ಟೈಲರಿಂಗ್ ತರಬೇತಿಯ ಜತೆಗೆ ಹೊಲಿಗೆ ಯಂತ್ರ, ಅಂಗವಿಕಲರ ಪ್ರಮಾಣಪತ್ರ, 9 ಅಂಗನವಾಡಿಗಳಿಗೆ ರೇಡಿಯೋ, ಜಾಗದ ದಾಖಲೆಪತ್ರ, 51 ಕುಟುಂಬಗಳಿಗೆ ಮನೆ ಸಾಮಗ್ರಿ, ಕಟ್ಟಡ ಕಾರ್ಮಿಕರಿಗೆ ಗುರುತಿನ ಚೀಟಿ ಇತ್ಯಾದಿ ವಿತರಣೆಯನ್ನು ಗಣ್ಯರು ನೆರವೇರಿಸಿದರು.

ಕಟ್ಟಡ ಕಾರ್ಮಿಕರ ಸಂಘದ ಸದಸ್ಯ ಚಂದ್ರಶೇಖರ್ ಮಡಿವಾಳ ಸ್ವಾಗತಿಸಿ, ಲೋಕೇಶ್ ಬೆತ್ತೋಡಿ ಕಾರ್ಯಕ್ರಮ ನಿರ್ವಹಿಸಿದರು. ಸುಮಾರು 3,000ಕ್ಕೂ ಮಿಕ್ಕಿ ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಉದಯವಾಣಿ - 26/3/2018